## ಮೊಗೆ ಬೀಜದ ಆರತಿಕಟ್ಟು

ಈ ಚಿತ್ರದಲ್ಲಿರುವ ಮೊಗೆ ಬೀಜದ ಆರತಿಕಟ್ಟನ್ನು ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕಿನ ಕಾನುಗೋಡು ಗ್ರಾಮದ 78 ವರ್ಷ ವಯಸ್ಸಿನ ವೃದ್ಧೆ ಸಾವಿತ್ರಿ ವೆಂಕಟರಮಣ ಹೆಗಡೆ ತಯಾರಿಸಿದ್ದಾರೆ. ಇಂತಹ ಆರತಿಕಟ್ಟನ್ನು ಸಿದ್ಧಪಡಿಸಲು ಒಂದು ತಿಂಗಳು ಬೇಕಾಗುತ್ತದೆ ಎನ್ನುವ ಸಾವಿತ್ರಿಯವರು ಈ ವಯಸ್ಸಿನಲ್ಲಿ ಸುತ್ತಲಿನ ಪರಿಸರದಲ್ಲಿ ಸಿಗುವ ನೈಜತೆಯಿಂದ ಕೂಡಿದ ಹಾಗೂ ಮಾಲಿನ್ಯ ಮುಕ್ತ ಅಲಂಕಾರಿಕ ವಸ್ತುಗಳನ್ನು ತಯಾರಿಸುವುದರಲ್ಲಿ ಇವರು ಸಿದ್ಧಹಸ್ತರು.

ಚಿತ್ರ- ಬರಹ:
**ವಿ. ಸಿ. ಪಾಟೀಲ, ಸಾಗರ**





## ಶಿಲಾ ಬಾಲಿಕೆಯರು

ಹೂವಿನಹಡಗಲಿ ಹತ್ತಿರವಿರುವ ಕುರುವನತ್ತಿಯ ಬಸವಣ್ಣ, ಶಿವ ದೇವಾಲಯ, ಚಾಳುಕ್ಯ ಶೈಲಿಯ ಶಿಲ್ಪ ಸೌಂದರ್ಯ ಯಾತ್ರಿಕರನ್ನು ಕೈಬೀಸಿ ಕರೆಯುತ್ತದೆ. ಸುಂದರ ಮಂಟಪಗಳು, ವೈವಿಧ್ಯಮಯ ಶಿಲಾ ಕಂಬಗಳು, ಅದರ ಮೇಲೆ ಕೆತ್ತಿದ ಶಿಲಾ ಬಾಲಿಕೆಯರು ದೇವಸ್ಥಾನದ ಭಾರ ಹೊತ್ತಂತೆ ಕಾಣುತ್ತಿದ್ದು, ಇದು ಅದ್ಭುತವಾಗಿದೆ. ಹೊರ ಆವರಣದ ದೇವಾಲಯ ಅಪೂರ್ವ ಕೆತ್ತನೆಯಿಂದ ಮನಕ್ಕೆ ಮುದ ನೀಡುತ್ತದೆ.

**-ಶ್ರೀಧರ ರಾಯಸಂ, ಬೆಂಗಳೂರು**

## ಕಲ್ಲಿನ ಮೇಲೆ ನೈಜ ಕುಸುರಿ

ನಮ್ಮ ಮನೆಯ ನಿರ್ಮಾಣಕ್ಕಾಗಿ ಕರಾವಳಿಯಂಚಿನಿಂದ ತರಿಸಲಾದ ಮರಳಿನಲ್ಲಿ ದೊರೆತ ಕಲ್ಲಿನ ಮೇಲೆ ಚಿತ್ರಿತವಾದ ಕುಸುರಿ ಇದು. ಹೊಳೆಯಲ್ಲಿನ ಸೂಕ್ಷ್ಮ ಜೀವಿಗಳು ಕಲ್ಲಿನ ಪದರದಲ್ಲಿ, ಯಾವುದೋ ಪ್ರಾಣಿಯ ಹೆಜ್ಜೆಯ ಗುರುತಿನಂತೆ ಚಿತ್ತಾರ ಮೂಡಿಸಿವೆ. ಮನೆಯ ಗೋಡೆಯೊಳಗೆ ಸೇರಬೇಕಿದ್ದ ಈ ಕಲಾಕೃತಿ ಇದೀಗ ಅದೇ ಗೋಡೆಯ ಷೋಕೇಸ್ ಅನ್ನು ಅಲಂಕರಿಸಿದೆ.

ಚಿತ್ರ-ಬರಹ:
**ದೀಕ್ಷಾ ದತ್ತಾತ್ರೇಯ, ಯಲ್ಲಾಪುರ**



